ಆರ್ ಬಿ ಐ / 2005 –06 / 231
ಡಿ ಎನ್ ಬಿ ಎಸ್ ( ಪಿಡಿ) ಸಿ.ಸಿ. ಸಂಖ್ಯೆ . 60 / 02.01. /2005–06

ಡಿಸೆಂಬರ್ 9, 2005

ಗೆ,
ಎಲ್ಲ ಬ್ಯಾಂಕಿಂಗೇತರ ಹಣಕಾಸು ಕಂಪನಿಗಳು ( ಎನ್‌ಬಿಎಫ್‌ಸಿಗಳು)
ಇತರ ಬ್ಯಾಂಕಿಂಗೇತರ ಕಂಪನಿಗಳು ( ಎಂಎನ್‌ಬಿಸಿ ಗಳು)
ಉಳಿದ ಬ್ಯಾಂಕಿಂಗೇತರ ಕಂಪನಿಗಳು ( ಆರ್‌ಎನ್‌ಬಿಸಿ ಗಳು)

ಮಾನ್ಯರೆ,

**<u>ಸಾರ್ವಜನಿಕ ಠೇವಣಿಗಳನ್ನು ಅಥವಾ ಠೇವಣಿಗಳನ್ನು ಅವಧಿ ತುಂಬುವ ಮೊದಲೇ ಮರು ಪಾವತಿಸುವುದು</u>**

ಶೀರ್ಷಿಕೆಯ ವಿಷಯದ ಬಗ್ಗೆ ದಿನಾಂಕ ಅಕ್ಟೋಬರ್ 5, 2004 ರಂದು ಹೊರಡಿಸಲಾಗಿರುವ ನಮ್ಮ ಸುತ್ತೋಲೆ ಡಿಎನ್‌ಬಿಎಸ್ ( ಪಿಡಿ) ಸಿ. ಸಿ. ಸಂಖ್ಯೆ 44 / 02.01 / 2004–05 ಇದನ್ನು ದಯವಿಟ್ಟು ನೋಡಿರಿ. ಸದರಿ ಸುತ್ತೋಲೆಯ ಪ್ಯಾರಾ 3 (5) ರಲ್ಲಿ ಏಕೈಕ / ಅದೇ ಸಾಮರ್ಥ್ಯದಲ್ಲಿ ಮೊದಲು ಹೆಸರಿಸಿರುವ ಠೇವಣಿದಾರನ ಹೆಸರಿನಲ್ಲಿರುವ ಎಲ್ಲ ಠೇವಣಿ ಖಾತೆಗಳನ್ನು ಅವಧಿ ತುಂಬುವುದಕ್ಕೆ ಮೊದಲೇ ಮರು ಪಾವತಿ ಮಾಡುವ ಉದ್ದೇಶಕ್ಕೆ ಒಗ್ಗೂಡಿಸಿ ಒಂದು ಠೇವಣಿಯಾಗಿ ಪರಿಗಣಿಸತಕ್ಕದ್ದು ಎಂದು ಉಪಬಂಧಿಸಲಾಗಿದೆ.

2. ಠೇವಣಿಗಳನ್ನು ಒಗ್ಗೂಡಿಸುವ ಸದರಿ ಖಂಡವು ಸಮಸ್ಯಾತ್ಮಕ ಎನ್‌ಬಿಎಫ್‌ಸಿ / ಆರ್‌ಎನ್‌ಬಿಸಿ / ಎಂಎನ್‌ಬಿಸಿ ಗಳ ವಿಷಯದಲ್ಲಿ ಮಾತ್ರ ಅನ್ವಯಿಸುತ್ತದೆ ಮತ್ತು ಸ್ಥಿತಿಯನ್ನು ಸ್ಪಷ್ಟಪಡಿಸಲು ಅದನ್ನು ತಿದ್ದುಪಡಿ ಮಾಡಲಾಗಿದೆ ಎಂದು ಒತ್ತಿ ಹೇಳಲಾಗಿದೆ. ತಿದ್ದುಪಡಿ ಮಾಡುವ ಅಧಿಸೂಚನೆಗಳ ಸಂಖ್ಯೆಗಳು 182 –184ರ ದಿನಾಂಕ ಹಾಗೂ ಅಧಿಸೂಚನೆಗಳ ಸಂಖ್ಯೆ
ಎ. ಡಿಎಫ್‌ಸಿ . 118 / ಡಿಜಿ (ಎಸ್ ಪಿ ಟಿ) – 98 ದಿನಾಂಕ ಜನವರಿ 31,1998;
ಬಿ. ಡಿಎಫ್‌ಸಿ . 55/ ಡಿಜಿ (ಒ) – 87 ದಿನಾಂಕ ಮೇ 15, 1987; ಮತ್ತು
ಸಿ. ಡಿಎನ್‌ಬಿಸಿ 39 / ಡಿಜಿ (ಹೆಚ್) – 77 ದಿನಾಂಕ ಜೂನ್ 20, 1977
(ತಹಲ್ ವರೆಗೆ ತಿದ್ದುಪಡಿ ಮಾಡಿದಂತೆ) ಇವುಗಳನ್ನು ನಿಮ್ಮ ಮಾಹಿತಿಗಾಗಿ ಮತ್ತು ಕಟ್ಟುನಿಟ್ಟಿನ ಪಾಲನೆಗಾಗಿ ಇದರೊಂದಿಗೆ ಲಗತ್ತಿಸಲಾಗಿದೆ.

3. ಹೀಗಾಗಿ ಏಕೈಕ / ಅದೇ ಸಾಮರ್ಥ್ಯದಲ್ಲಿ ಮೊದಲು ಹೆಸರಿಸಿರುವ ಠೇವಣಿದಾರನ ಹೆಸರಿನಲ್ಲಿ ಇರುವ 10,000 ರೂವರೆಗಿನ ಮೊತ್ತದ ಎಲ್ಲ ಠೇವಣಿ ಖಾತೆಗಳನ್ನು ಸಂದರ್ಭಾನುಸಾರ ಅವಧಿ ತುಂಬುವ ಮೊದಲೇ ಠೇವಣಿದಾರನಿಗೆ ಮರುಪಾವತಿ ಮಾಡುವುದಕ್ಕಾಗಿ / ಸಾಲವನ್ನು ಮಂಜೂರು ಮಾಡುವುದಕ್ಕಾಗಿ ಒಗ್ಗೂಡಿಸುವುದಕ್ಕೆ ಸಂಬಂಧಿಸಿದ ಖಂಡವು ಸಮಸ್ಯಾತ್ಮಕ ಎನ್‌ಬಿಎಫ್‌ಸಿ / ಆರ್‌ಎನ್‌ಬಿಸಿ / ಎಂಎನ್‌ಬಿಸಿ ಗಳ ವಿಷಯದಲ್ಲಿ ಮಾತ್ರ ಅನ್ವಯವಾಗುತ್ತದೆ.

4. ಠೇವಣಿದಾರನು ಮೃತಪಟ್ಟ ಸಂದರ್ಭದಲ್ಲಿ ಸಮಸ್ಯಾತ್ಮಕ ಎನ್‌ಬಿಎಫ್‌ಸಿ / ಆರ್‌ಎನ್‌ಬಿಸಿ / ಎಂಎನ್‌ಬಿಸಿಗಳು ಕೂಡ ಠೇವಣಿಯನ್ನು / ಸಾರ್ವಜನಿಕ ಠೇವಣಿಯನ್ನು ಒಟ್ಟುಗೂಡಿಸದೆ ಬಂಧಿತಾವಧಿಯೊಳಗೆ ಠೇವಣಿಯನ್ನು /ಸಾರ್ವಜನಿಕ ಠೇವಣಿಯನ್ನು ಮರು ಪಾವತಿ ಮಾಡತಕ್ಕದ್ದು– ಎಂದು ನಾವು ಪುನರುಚ್ಛರಿಸುತ್ತೇವೆ.

5. ತಲುಪಿದ್ದಕ್ಕೆ ನಿಮ್ಮ ಕಂಪನಿಯ ನೋಂದಾಯಿತ ಕಚೇರಿ ಯಾರ ಅಧಿಕಾರ ವ್ಯಾಪ್ತಿಯಲ್ಲಿದೆಯೋ ಆ ಪ್ರದೇಶದ ಬ್ಯಾಂಕಿಗೇತರ ಮೇಲ್ವಿಚಾರಣಾ ಇಲಾಖೆಯ ಪ್ರಾದೇಶಿಕ ಕಚೇರಿ, ಭಾರತೀಯ ರಿಸರ್ವ್ ಬ್ಯಾಂಕ್, ಇವರಿಗೆ ದಯವಿಟ್ಟು ಸ್ವೀಕೃತಿ ನೀಡಿ.

**ತಮ್ಮ ವಿಶ್ವಾಸಿ,**
**ಸಹಿ /–**
**( ಪಿ. ಕೃಷ್ಣಮೂರ್ತಿ)**
ಮುಖ್ಯ ಪ್ರಧಾನ ವ್ಯವಸ್ಥಾಪಕರು – ಪ್ರಭಾರ